ಆವರಣ ದಾಟಿ ಹೊರಸಿಡಿದು ನಿಲ್ಲಲು ಸಹಾಯ ಮಾಡುವಂಥ ದ್ರವ್ಯ, ಆರೋಗ್ಯದ ಸೂಚನೆಯೇ ಹೌದು. ಆ ಪೊಲೀಸು ಗುಡುಗಾಡಿದ, ಎಗರಾಡಿದ, ಹೊಗೆಯಾಡಿದ. ಆದರೆ, ಮತ್ತೆ ಮುಂದೆಂದೂ ಯಾವ ಪೊಲೀಸಿನವನೂ ನನ್ನ ಎದುರು ಇಂಥ ಭಾಷೆಯ ಪ್ರಯೋಗ ನಡೆಸಲಿಲ್ಲ.

ಇನ್ನೊಂದು ಸಲ ಹಾಗಾದದ್ದು ನನ್ನ ಕಡ್ಡಾಯ ನಿದ್ರಾಭಂಗದ ದೀರ್ಘ ಅವಧಿಯೊಂದರಲ್ಲಿ; ಅದು ನಡೆದದ್ದು ಬೆಳಗಿನ ಜಾವ ನಾಲ್ಕು ಗಂಟೆಯ ಸುಮಾರಿನಲ್ಲಿ. ಆಗ ನನ್ನ ತಲೆ ಸುಟ್ಟು ರಾಶಿಯಾದ ಬಿಸಿ ಬೂದಿಯಲ್ಲಿ ಬೇಯುತ್ತಿದ್ದ ಹಾಗೆ ಭಾಸವಾಗುತ್ತಿತ್ತು. ಪೊಲೀಸು ಲೋಹದ ತುಂಡಿನಿಂದ ಮೇಜನ್ನು ಕುಟ್ಟುತ್ತ ಸದ್ದು ಮಾಡುತ್ತಿದ್ದ: ಒಮ್ಮೆ ಅಕಸ್ಮಾತ್ ಎಂಬಂತೆ ಕುಟ್ಟಿಬಿಡುತ್ತಿದ್ದ; ಮತ್ತೊಮ್ಮೆ ಒಂದೇ ಪ್ರಕಾರ ತಾಳ ಹಾಕಿದಂತೆ ಕುಟ್ಟುತ್ತಿರುತ್ತಿದ್ದ; ಒಮ್ಮೆ ಮೆಲ್ಲಗೆ, ಒಮ್ಮೆ ಗಟ್ಟಿಯಾಗಿ, ಹುಚ್ಚು ತಿರುಗಿದ ಹಾಗೆ ಕುಟ್ಟುತ್ತಿದ್ದ. ಈ ಒಂದೊಂದು ಸದ್ದೂ, ಒಂದೊಂದು ಸಲವೂ, ಸುತ್ತಿಗೆಯ ಏಟಿನಂತೆ ಹೃದಯಕ್ಕೇ ನೇರ ಹೊಕ್ಕು ಅಪ್ಪಳಿಸುತ್ತಿತ್ತು. ಮತ್ತೆ ಅದೇ ಸುಟ್ಟು ರಾಶಿಬಿದ್ದ ಬಿಸಿ ಬೂದಿಯಲ್ಲಿ ತಲೆ ಕೊತಗುಟ್ಟುತ್ತಿರುವಂತೆ ಭಾಸವಾಗುತ್ತಿತ್ತು.

... ಅಲ್ಲಿ ಪೊಲೀಸರ ಒಂದು ದಂಡೇ ಇರುತ್ತಿತ್ತು; ಕೆಲವು ಸಲ ಇಬ್ಬರೇ ನನ್ನನ್ನು ಕಾಯುತ್ತಿದ್ದುದೂ ಉಂಟು. ಅವರು ಸರದಿಯ ಪ್ರಕಾರವೋ ಎನ್ನುವಂತೆ ಆಗಾಗ ಬದಲಾಯಿಸಿಕೊಳ್ಳುತ್ತಿದ್ದರು. ಪ್ರತಿ ನಾಲ್ಕು ಗಂಟೆಗೋ ಏನೋ ಪೊಲೀಸಿನವರು ಬದಲಾಗುತ್ತಿದ್ದರು; ಅವರು ಕೂಡ ತಮ್ಮ ಸೋತ ದೇಹ, ಮನಸ್ಸುಗಳನ್ನು ತುಂಬಿಕೊಳ್ಳಬೇಡವೇ?

... ಒಮ್ಮೆ ಒಬ್ಬ ಪೊಲೀಸ್ ಅಧಿಕಾರಿ ನನ್ನ ಕಣ್ಣು ತೆರೆಸಲು ಕಿರುಚುತ್ತಿದ್ದಾಗ, ನಾನು ಕಣ್ಣು ಬಿಡುವುದಕ್ಕೇ ನಿರಾಕರಿಸಿದ್ದರೆ ಏನಾಗಬಹುದಿತ್ತು ಎಂದು ಅಚ್ಚರಿಗೊಂಡಿದ್ದೇನೆ: ಏನೂ ಆಗಬಹುದಿತ್ತು, ಈ ಕಡೆಯೋ ಆ ಕಡೆಯೋ ಯಾವುದೋ ಒಂದು ಆಗಿ ಇಡೀ ಸಂಗತಿ ಬೇಗ ಮುಗಿದುಹೋಗಿಬಿಡಬಹುದಿತ್ತು. ಆದರೆ ಮನುಷ್ಯನ ಮನಸ್ಸಿನೊಳಕ್ಕೆ ಕಣ್ಣಿಟ್ಟು ನೋಡುವ ಅವಕಾಶ ನನಗೆ ತಪ್ಪಿಹೋಗುತ್ತಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿ ತನಗರಿವಿಲ್ಲದೆಯೇ ನನ್ನನ್ನು ಅಂಥ ಒಳನೋಟಕ್ಕೆ ಕೊಂಡೊಯ್ದಿತು. ನನ್ನ ಜಡತೆ, ಕುತೂಹಲಗಳೂ ಅದಕ್ಕೆ ನೆರವಾಗಿದ್ದವು...

... ನನ್ನ ಉಸ್ತುವಾರಿಯಲ್ಲಿದ್ದ ಪೊಲೀಸ್ ಅಧಿಕಾರಿ ಹಿಂದೆ ಭಗತ್‌ಸಿಂಗ್‌ನ ಉಸ್ತುವಾರಿಗಾಗಿ ನೇಮಕವಾಗಿದ್ದನಂತೆ. ಭಗತ್‌ಸಿಂಗ್ ಇಂಡಿಯಾಕ್ಕೆ ಆದ ಅನ್ಯಾಯಗಳಿಗಾಗಿ ಸೇಡು ತೀರಿಸಿಕೊಂಡಿದ್ದ; ಆ ಅಪರಾಧಕ್ಕಾಗಿ ಬ್ರಿಟಿಷರು ಅವನನ್ನು ಗಲ್ಲಿಗೇರಿಸಿದ್ದರು.

'ಭಗತ್‌ಸಿಂಗ್ ಕೂಡ ಬಾಯಿ ಬಿಚ್ಚಿದ್ದ' ಎಂದ ಆ ಅಧಿಕಾರಿ.

'ಆಗ ಭಗತ್‌ಸಿಂಗ್‌ಗೆ ವಯಸ್ಸೆಷ್ಟು?' ಎಂದು ಕೇಳಿದೆ.

ಅವನು ಇನ್ನೂ ಚಿಕ್ಕ ವಯಸ್ಸಿನವನಿದ್ದನಂತೆ. ನಿಜ, ಚಿಕ್ಕವರಲ್ಲಿ ಯಾವುದನ್ನು ಕ್ಷಮಿಸಬಹುದೋ, ಅಥವಾ ಕನಿಷ್ಠ ಅರ್ಥಮಾಡಿಕೊಳ್ಳಬಹುದೋ ಅಂಥದನ್ನು ದೊಡ್ಡವರಲ್ಲಿ ಕ್ಷಮಿಸುವುದಾಗಲಿ, ಅರ್ಥಮಾಡಿಕೊಳ್ಳುವುದಾಗಲಿ ಕಷ್ಟವೇ.

ಈ ಹಿಂಸೆಯ ಕಾಲದಲ್ಲಿ ಅಧಿಕಾರಿ ಮತ್ತು ನಾನು ಪರಸ್ಪರ ಮಾತು ಆಡುತ್ತಿರಲಿಲ್ಲ. ಒಮ್ಮೊಮ್ಮೆ ಮಾತ್ರ, ಹಿಂಸೆ ತುಸು ಸಡಲಿದಾಗ ಏನಾದರೂ ಮಾತುಕತೆಗಳಾಗುತ್ತಿದ್ದವು, ಅದೂ ಒಂದಕ್ಕೊಂದು ಸಂಬಂಧವಿಲ್ಲದ, ಹೊತ್ತು ಕಳೆವ ಮಾತುಗಳು. ಅಲ್ಲಿದ್ದ ಪೊಲೀಸರಲ್ಲಿ ಒಬ್ಬ ಇತಿಹಾಸದಲ್ಲಿ ಮಾಸ್ಟರ್ ಡಿಗ್ರಿ ಪಡೆದಿದ್ದು, ಕಾನ್‌ಸ್ಟೆಬಲ್ ದರ್ಜೆಯಿಂದ ಇನ್‌ಸ್ಪೆಕ್ಟರ್ ದರ್ಜೆಗೆ ಏರಿದವನು. ಈ ಬಗ್ಗೆ ಜಂಭಪಟ್ಟುಕೊಳ್ಳುತ್ತಿದ್ದವನು; ಅದೇ ಕಾರಣದಿಂದ ಹೆಚ್ಚು ಕ್ರೂರಿಯೂ ಆಗಿದ್ದವನು. ನಮ್ಮ ಅಸಂಬದ್ಧ ಮಾತುಕತೆಗಳ ಹೊತ್ತಿನಲ್ಲಿ ಅವನು ಜೀಸಸ್ ಕ್ರೈಸ್ಟ್ ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದ ಎಂದು ಹೇಳಿದ್ದ. ಒಮ್ಮೆ ಅಸಹ್ಯ ಹಿಂಸೆಯ ಅವಧಿಯಲ್ಲೆ ಬಕ್ರೀದ್ ದಿನ ಬಂದಾಗ ಕೂಡ ಆತ ಹಿಂಸೆಯನ್ನು ಸಡಿಲಿಸಿದ್ದಿಲ್ಲ. ಆದರೆ ಆ ದಿನ ಸಂಜೆ ಅವನು ಪೈನಾಪಲ್ ಮತ್ತು ಇತರ ಹಣ್ಣುಗಳನ್ನು ನನಗೆ ತಂದುಕೊಟ್ಟ.

ಆತನದು ಮೂಲತಃ ಗ್ರಾಮ್ಯಜೀವನ; ಆಳದಲ್ಲಿ ಅಷ್ಟಿಷ್ಟು ಹಿತವೆನ್ನಿಸುವಂಥದೇ ಇದ್ದಿರಬೇಕು. ಆದರೆ ಆತನ ಈ ದಿನಚರಿಯಲ್ಲಿ ಮತ್ತು ಬಡ್ತಿಯ ಆಸೆಯಲ್ಲಿ ಅದು ವಿಕೃತವಾಗಿಬಿಟ್ಟಿತ್ತು. ಅವನಿಗೆ ಒಂದು ಹೀನ ಅಭ್ಯಾಸವಿತ್ತು—ಎಳೆಯ ಕೋಳಿಗಳನ್ನು ಗೂಡಿನಲ್ಲೋ ಅಥವಾ ಬಟ್ಟೆಯಲ್ಲೋ ತುಂಬಿ ತಂದಿಟ್ಟುಕೊಳ್ಳುವುದು. ಅದನ್ನು ಅವನು ನನ್ನ ಎದುರು ನೇತು ಹಾಕಿ ಇಡುತ್ತಿದ್ದ. ಒಂದೊಂದು ಸಲ ಅರಚುತ್ತ, ಒಂದೊಂದು ಸಲ ರೊಚ್ಚಿನಿಂದ ರೆಕ್ಕೆ ಪಟಪಟಿಸುತ್ತ, ವಿಧೇಯವಾಗಿ ಸಾವನ್ನು ನಿರೀಕ್ಷಿಸುತ್ತಾ ತಲೆ ಜೋಲಿಸಿ ಬೀಳುವ ಆ ಎಳೆಯ ಕೋಳಿಗಳನ್ನು ಕಂಡರೆ ನನಗೆ ಹೇಗಾಗುತ್ತಿತ್ತೆಂಬುದು ಪ್ರಾಯಶಃ ಆತನಿಗೆ ತಿಳಿದಿರಲಿಲ್ಲ.

ಆಗಾಗ ಆ ಅನಾಗರಿಕ ಏಕಾಂತದಲ್ಲಿ ಕಾವಳದ ಹತಾಶೆಯಲ್ಲಿ ಮುಳುಗಿಹೋಗುತ್ತಿದ್ದೆ. ನಾನೊಂದು ಬಿಲದಲ್ಲಿ ಸೇರಿಕೊಂಡಿರುವಂತೆ, ಆ ಬಿಲದ ಬಾಯಿಗೆ ಬೆಣೆ ಜಡಿದಿದ್ದಾರೋ ಎನ್ನುವಂತೆ ಅನ್ನಿಸುತ್ತಿತ್ತು. ನನ್ನ ಸುತ್ತ ಇರುವ ಜಗತ್ತಿನಲ್ಲಿ ನನಗೆ ಸ್ನೇಹಿತರೇ ಇಲ್ಲವೆಂಬಂತೆ, ಯಾರೊಬ್ಬರಿಗೂ ನನ್ನ ಇರವಿನ ಬಗ್ಗೆ ಅರಿವೇ ಇಲ್ಲವೇನೋ ಎನ್ನಿಸುತ್ತಿತ್ತು. ಒಮ್ಮೆ, ನನ್ನ ಬಂದೀಖಾನೆಗೂ ಆಫೀಸಿಗೂ ನಡುವಿದ್ದ ಪಾವಟಿಗೆಯ ಮೇಲಿಂದ ಜಿಗಿದು ಬಿಡಬೇಕೆಂದು ಯೋಚಿಸಿದೆ. ಆದರೆ ಹಾಗೆ ಮಾಡಲಾರದವನಾಗಿದ್ದೆ; ನನಗೆ ಸಿಕ್ಕಿದ್ದು ಕೋಳದ ಎಳೆತ ಮತ್ತು ಅಪಹಾಸ್ಯ.

ಒಮ್ಮೆ ಆಫೀಸಿನ ಕಿಟಕಿಯಿಂದ ಹೊರಗೆ ಕಾಂಪೌಂಡಿನಲ್ಲಿ ಪಹರೆಯವರ ಒಂದು ಗುಂಪು ಒಂದು ಜಿಂಕೆಯ ಜೊತೆ ಆಟವಾಡುತ್ತಿದ್ದುದನ್ನು ನೋಡಿದೆ. ಇದು ಸಾಮಾನ್ಯವಾದ ಆಟವಾಗಿರಲಿಲ್ಲ. ಆ ಜಿಂಕೆ ಖುಷಿಗೊಂಡಂತಿತ್ತು. ಅತ್ಯಂತ ಉತ್ತೇಜಿತವಾಗಿ ಕುಣಿಯತೊಡಗಿತ್ತು. ಎದೆ ಪಕ್ಕೆಗಳು ಬಡಿದುಕೊಳ್ಳುತ್ತಿದ್ದವು. ಈ ಪಹರೆಯವರಲ್ಲಿ ಯಾರನ್ನೋ ಮೂಸಲು, ನೆಕ್ಕಲು ಅಥವಾ ಮುತ್ತಿಡಲು ಹವಣಿಸುತ್ತಿದೆಯೇನೋ ಎಂಬಂತೆ ಕಾಣುತ್ತಿತ್ತು.

ಇಷ್ಟು ದಿನ ಕಳೆದು ಈಗ ಅದನ್ನು ನೆನಸಿಕೊಂಡಾಗ ಜಿಂಕೆಗಣ್ಣುಗಳು ಎಂದು ಯಾವುದಕ್ಕೆ ಹೇಳುತ್ತಾರೋ ಅವಕ್ಕಿಂತ ಅದರ ಕಣ್ಣುಗಳು ಸುಂದರವಾಗಿದ್ದವು ಎನ್ನಿಸುತ್ತದೆ. 'ಈ ಪಹರೆಯವರು ಆ ಜಿಂಕೆಗೆ ಬೆದೆ ಬರುವ ಹಾಗೆ ಮಾಡುವುದುಂಟು' ಎಂದು ಪೊಲೀಸನೊಬ್ಬ ಹೇಳಿದ. ಆ ಪಹರೆಯವರಲ್ಲಿ ಕೆಲವರು 'ಪ್ರಾಣತತ್ವ'ದ ಎಂಥ ಆರಾಧಕರೆಂದರೆ, ಅವರು ಪ್ರಾಣಿ, ಮನುಷ್ಯರ ನಡುವಣ ಅಂತರವನ್ನೆ ಅಳಿಸಿಹಾಕಬಲ್ಲವರಾಗಿದ್ದರು.

ಅವರು ಪಂಜಾಬ್ ಮತ್ತು ಸರಹದ್ದಿನ ಪ್ರಾಂತಗಳಿಂದ ಬಂದ ಭಯಂಕರ ಜನರಾಗಿದ್ದರು. ಜೀವನದ ಕೆಲವೇ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ದೃಷ್ಟಿಯಿಂದಲಂತೂ ಇವರು ಆದಿಮಾನವನ ಸೊಕ್ಕಿನಿಂದ ಬದುಕುತ್ತಿರುವಂಥವರು ಎನ್ನಿಸುತ್ತಿತ್ತು. ಸಾಮಾಜಿಕ ವಿಷಯಗಳಲ್ಲಿ ಒಳಿತು ಕೆಡುಕುಗಳ ಆಚೆಗೇ ಇದ್ದವರು ಅವರು. ಆ ಹಿಂಸೆಯ ವಠಾರದಲ್ಲಿ, ತಾವು ತಮ್ಮ ಸಹಜೀವಿಗಳ ಮೇಲೆ ದೌರ್ಜನ್ಯ ನಡೆಸಲು ನೆರವಾಗುತ್ತಿದ್ದೇವೆ ಎಂಬುದು ಅವರಿಗೆ ತಿಳಿದೇ ಇರಲಿಕ್ಕಿಲ್ಲ. ಅಥವಾ ಹಾಗೆ ತಿಳಿದಿದ್ದರೂ ಅದು ತಮ್ಮ ಜವಾಬ್ದಾರಿಯ ವಲಯದಿಂದ ಹೊರಕ್ಕೆ ಇದ್ದದ್ದು ಎಂದುಕೊಂಡಿರಬೇಕು.

ಮೊದಲ ದಿನಗಳಲ್ಲಿ ಒಂದೆರಡು ತಿಂಗಳು ಈ ಪಹರೆಯವರಾರೂ ನನ್ನೊಡನೆ ಒಂದು ಮಾತೂ ಆಡಿದ್ದಿಲ್ಲ. ನಾನು ಮಾತಾಡುತ್ತಿದ್ದರೆ ಅದು ಗೋಡೆಗಷ್ಟೇ ಎಂದು ತಿಳಿಯಲು ನನಗೆ ಬಹಳ ಕಾಲ ಬೇಕಾಗಲಿಲ್ಲ. ನಾನು ಕಿರುಚಿಕೊಳ್ಳಲಾರೆ ಎಂದು ಅವರಿಗೆಲ್ಲ ಅನ್ನಿಸಿದಾಗ, ಎಲ್ಲೋ ಒಮ್ಮೊಮ್ಮೆ, ಯಾರೋ ಒಬ್ಬಿಬ್ಬರು ಉಳಿದ ಅಲ್ಲಿನ ನಿವಾಸಿಗಳ ಬಗ್ಗೆ ಒಂದೊಂದು ಪಿಸುಮಾತು ಆಡಿದ್ದುಂಟು.

ಅವರಲ್ಲಿ ನಿರಾಯುಧನಾಗಿದ್ದ ಒಬ್ಬ ಕಾನ್‌ಸ್ಟೇಬಲ್ ತುಂಬ ಒಳ್ಳೆಯವನಾಗಿದ್ದ. ನನ್ನ ಹತ್ತಿರ ಅವನೊಬ್ಬನನ್ನೇ ಕಾಯಲು ಬಿಟ್ಟಿದ್ದಾಗ ಅವನು ನನಗೆ ಕಣ್ಣು ಮುಚ್ಚಿಕೊಳ್ಳಲು ಬಿಡುತ್ತಿದ್ದ. ಆತ ಮಧ್ಯ ವಯಸ್ಸಿನವ, ಕರುಣೆ ಎಂಬುದನ್ನು ಬಲ್ಲವ. ನನ್ನ ಹಿಂಸೆಯ ಕೊನೆಯ ದಿನಗಳಲ್ಲಂತೂ ಈತ ಎಷ್ಟು ಕಳವಳಗೊಂಡಿದ್ದನೆಂದರೆ ಅಲ್ಲಿನ ಅಧಿಕಾರಿಗಳಲ್ಲೆಲ್ಲ ದುಷ್ಟನಾಗಿದ್ದ ಒಬ್ಬನ ಮೇಲೆ ಕೈ ಮಾಡುವಂತೆ ನನಗೆ ಹೇಳಿದ್ದ. ಏನೇ ಇರಲಿ, ಸಾಮಾಜಿಕ ಚಿಂತನೆಯ ಗಂಧಗಾಳಿಯಿಲ್ಲದೆ ಸ್ಪಷ್ಟ ಊನವಿದ್ದಾಗ್ಯೂ, ಅವರೆಲ್ಲ ತೀರ ಸರಳ ಮನುಷ್ಯರಾಗಿದ್ದರು. ಆದರೆ ಅವರು ಉಸಿರಾಡುತ್ತಿದ್ದ ಹಿಂಸೆಯ ಗಾಳಿ ಅವರ ಅಂತರಾತ್ಮವನ್ನೇ ಮರಗಟ್ಟಿಸಿಬಿಟ್ಟಿತ್ತು.

ಆ ಸಾವಿನ ಮನೆಯಲ್ಲಿ ಒಮ್ಮೊಮ್ಮೆ ಕಿವಿಯೊಡೆಯುವ ಚೀರಿಕೆಗಳನ್ನು ಕೇಳುತ್ತಿದ್ದೆ. ಸಾಮಾನ್ಯವಾಗಿ ವಾತಾವರಣ ಸ್ತಬ್ಧವಾಗೇ ಇರುತ್ತಿತ್ತು. ಒಮ್ಮೆ ಮಾತ್ರ ಅಲ್ಲಿ ಒಂದು ನಿರ್ಭೀತ ಜೀವ ಪಹರೆಯವರನ್ನು ಧಿಕ್ಕರಿಸಿ, ಅಡೆತಡೆಯಿಲ್ಲದೆ ಗಟ್ಟಿಯಾಗಿ ಗಾಯತ್ರಿ